ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ದಿನೇಶ್ ಮಹೇಶ್ವರಿ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

ಮೊಹಮ್ಮದ್ ಮೊಯಿನುದ್ದೀನ್ ಮನ್ಸಬ್ದಾರ್ ವಿರುದ್ಧ ಭಾರತ ಸರ್ಕಾರದ ಅರಣ್ಯ ಪರಿಸರ ಮಂತ್ರಾಲಯ ಮತ್ತು ಇತರರು

ರಿಟ್ ಅರ್ಜಿ ಸಂ. 2635/2017 (ಜಿಎಮ್-ಪಿಐಎಲ್) ಪಿಐಎಲ್, ದಿನಾಂಕ 13 ನೇ ಜೂನ್, 2018

ಆಜ್ಞೆ

ಮುಖ್ಯ ನ್ಯಾಯಮೂರ್ತಿ ಶ್ರೀ ದಿನೇಶ್ ಮಹೇಶ್ವರಿ:

ಪ್ರತ್ಯರ್ಜಿದಾರಸಂಖ್ಯೆ: 2 ಇವರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಈ ರಿಟ್ ಅರ್ಜಿಯಲ್ಲಿ ಸಲಹೆ ಮಾಡಿದಂತೆ, ಕುಂದು-ಕೊರತೆಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010 ರ (2010 ರ ಅಧಿನಿಯಮ) 16 ನೇ ಪ್ರಕರಣದ, ನಿರ್ದಿಷ್ಟವಾಗಿ ಅದರ (ಜಿ) ಖಂಡದ ಕಾರಣದಿಂದ, ನೇರವಾಗಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ವ್ಯಾಪಿಗೆ ಬರುತ್ತದೆ ಎಂದು ಪ್ರಾರಂಭದಲ್ಲೇ ವಾದಿಸಿದ್ದಾರೆ.

2. ಆದಾಗ್ಯೂ, ಶ್ರೀ ಶಿವ ಶ್ರೀನಿವಾಸನ್, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಪ್ರತ್ಯರ್ಜಿದಾರಸಂಖ್ಯೆ: 3 ಆದ ಕಂಪನಿಯು, ಪರಿಸರ ಸಂಬಂಧಿ ಅನುಮತಿಯ ಅಗತ್ಯತೆಗಳನ್ನು ಪಾಲಿಸದೆ ಇರುವುದು, ಕೃಷಿ ಭೂಮಿ ಮತ್ತು ಜಲ ಸಂಪನ್ಮೂಲಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವುದನ್ನು ಒಳಗೊಂಡು, 80 ಸುತ್ತಮುತ್ತಲಿನ ಪ್ರದೇಶ ಮತ್ತು ಸಮಾಜದ ಮೇಲೆ ಅತ್ಯಂತ ಹೆಚ್ಚಿನ ದುಷ್ಪರಿಣಾಮಗಳನ್ನು ಮತ್ತು ದೂರಗಾಮಿ ಪರಿಣಾಮಗಳನ್ನುಂಟು ಮಾಡಿದೆ ಎಂದು ಪಟ್ಟುಬಿಡದೆ ವಾದಿಸಿದ್ದಾರೆ.

3. ಹಲವಾರು ವಾಸ್ತವಿಕ ಅಂಶಗಳನ್ನು ಕುರಿತು ವಿಚಾರಣೆಯನ್ನು ಅಗತ್ಯಗೊಳಿಸಬೇಕೆಂದು ಅರ್ಜಿದಾರರ ಪರವಾಗಿ ಕೋರಿ ಮಾಡಿದ ನಿವೇದನೆಗಳು; ಮತ್ತು ಅಂಥ ವಿಷಯಗಳ ಬಗ್ಗೆ ವ್ಯವಹರಿಸಲು ನ್ಯಾಯಾಧಿಕರಣಕ್ಕೆ ವಿಶೇಷ ೧ ಅಧಿಕಾರವ್ಯಾಪ್ತಿ ಲಭ್ಯವಿರುವಾಗ, ಈ ಅರ್ಜಿಯಲ್ಲಿ ಎತ್ತಬೇಕೆಂದು ಕೋರಿದ ಎಲ್ಲಾ ವಿವಾದಗಳನ್ನು ನ್ಯಾಯಾಧಿಕರಣದ ಮುಂದೆ ಎತ್ತಬಹುದೆಂದು ಹೇಳದೆ ಇರುವುದಕ್ಕೆ ನಮಗೆ ಆತಂಕವಾಗುತ್ತದೆ.

4. 2010 ರ ಅಧಿನಿಯಮದ 14 ನೇ ಪ್ರಕರಣದ ಅಡಿಯಲ್ಲಿ, ಪರಿಸರಕ್ಕೆ ಸಂಬಂಧಿಸಿದ ಪ್ರಮುಖ ಪ್ರಶ್ನೆ ಇರುವ ಎಲ್ಲಾ ಸಿವಿಲ್ ಮೊಕದ್ದಮೆಗಳ ಮೇಲೆ ನ್ಯಾಯಾಧಿಕರಣವು ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ; ಮತ್ತು ಅಂಥ ಪ್ರಶ್ನೆಯು, ಅನುಸೂಚಿ- I ರಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳ ಅನುಷ್ಠಾನದ ಹೊರಗೆ ಉದ್ಭವಿಸುತ್ತದೆ ಎಂದು ಹೇಳಿರುವುದನ್ನು ಸಹ ನಾವು ಇಲ್ಲಿ ಉಲ್ಲೇಖಿಸಬಹುದು.14 ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

"14. ವಿವಾದಗಳ ಇತ್ಯರ್ಥಕ್ಕಾಗಿ ನ್ಯಾಯಾಧಿಕರಣ.- ( 1) ಪರಿಸರಕ್ಕೆ ಸಂಬಂಧಿಸಿದ ಮಹತ್ವದ ಪ್ರಶ್ನೆಯನ್ನು ಒಳಗೊಂಡಿರುವ (ಪರಿಸರಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಜಾರಿಯನ್ನು ಒಳಗೊಂಡು) ಮತ್ತು ಅಂಥ ಪ್ರಶ್ನೆಯು, ಅನುಸೂಚಿ- I ರಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳ ಅನುಷ್ಠಾನದ ಹೊರಗೆ ಉದ್ಭವಿಸುವ, ಎಲ್ಲಾ ಸಿವಿಲ್ ಮೊಕದ್ದಮೆಗಳ ಅಧಿಕಾರ ವ್ಯಾಪ್ತಿಯನ್ನು ನ್ಯಾಯಾಧಿಕರಣವು ಹೊಂದಿರತಕ್ಕದ್ದು.

(2) ನ್ಯಾಯಾಧಿಕರಣವು, ( 1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಶ್ನೆಗಳಿಂದ ಉದ್ಭವಿಸುವ ವಿವಾದಗಳ ಸುನಾವಣೆ ಮಾಡತಕ್ಕದ್ದು ಮತ್ತು ಅಂಥ ವಿವಾದಗಳನ್ನು ಇತ್ಯರ್ಥಪಡಿಸಿ, ಅದರ ಮೇಲೆ ಆದೇಶವನ್ನು ಹೊರಡಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿನ ವಿವಾದ ತೀರ್ಮಾನಕ್ಕೆ ಸಲ್ಲಿಸಿದ ಯಾವುದೇ ಅರ್ಜಿಯನ್ನು, ಅಂಥ ವಿವಾದವು ಮೊದಲು ಯಾವ ದಿನಾಂಕದಂದು ಉದ್ಭವಿಸಿತೋ, ಆ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಅದನ್ನು ಸಲ್ಲಿಸಿದ ಹೊರತು, ನ್ಯಾಯಾಧಿಕರಣವು ಅದನ್ನು ಪುರಸ್ಕರಿಸತಕ್ಕದ್ದಲ್ಲ;

ಪರಂತು, ಅರ್ಜಿದಾರನು, ಸದರಿ ಅವಧಿಯ ಒಳಗೆ ಅರ್ಜಿಯನ್ನು ಸಲ್ಲಿಸುವುದರಿಂದ ಸಾಕಷ್ಟು ಕಾರಣದಿಂದ ತಡೆಯಲ್ಪಟ್ಟಿದ್ದನು ಎಂದು ನ್ಯಾಯಾಧಿಕರಣಕ್ಕೆ ಮನವರಿಕೆಯಾದರೆ, ಅದು ಆರು ದಿನಗಳನ್ನು ಮೀರದ ಹೆಚ್ಚಿನ ಅವಧಿಯೊಳಗೆ ಅದನ್ನು ಸಲ್ಲಿಸಲು ಅವಕಾಶ ನೀಡಬಹುದು.

5. 2010 ರ ಅಧಿನಿಯಮದ 2 ನೇ ಪ್ರಕರಣದ (ಎಮ್) ಖಂಡವು, ' ಪರಿಸರಕ್ಕೆ ಸಂಬಂಧಿಸಿದ ಮಹತ್ವದ ಪ್ರಶ್ನೆ ' ಎಂಬ ಪದಾವಳಿಯು, ಇತರ ವಿಷಯಗಳ ಜೊತೆಗೆ, ಜನ ಸಮುದಾಯವು, ಪ್ರತಿಕೂಲ ಪರಿಣಾಮದಿಂದ ಬಾಧಿತರಾಗಿರುವ ಅಥವಾ ಬಾಧಿತರಾಗುವ ಸಂಭವವಿರುವ ನಿರ್ದಿಷ್ಟ ಶಾಸನಾತ್ಮಕ ಪರಿಸರ ಸಂಬಂಧಿ ಬಾಧ್ಯತೆಯನ್ನು ನೇರವಾಗಿ ಉಲ್ಲಂಘಿಸಿದ; ಅಥವಾ ಪರಿಸರ ಅಥವಾ ಸ್ವತ್ತಿಗೆ ಗಣನೀಯ ಹಾನಿಯಾಗಿರುವ; ಅಥವಾ ಸಾರ್ವಜನಿಕ ಆರೋಗ್ಯಕ್ಕೆ ಸಾಕಷ್ಟು ಹಾನಿಯಾಗಿರುವ ನಿದರ್ಶನಗಳನ್ನು ಒಳಗೊಳ್ಳುವುದಕ್ಕೆ ಪರಾಪ್ತವಾಗಿದೆ ಎಂಬುದುನ್ನು ಸ್ಪಷ್ಟಪಡಿಸುತ್ತದೆ.ನಿರ್ದಿಷ್ಟ ಕಾರ್ಯಚಟುವಟಿಕೆಗೆ ಸಂಬಂಧಿಸಿದ ಪರಿಸರ ಸಂಬಂಧಿ ಪರಿಣಾಮಗಳನ್ನು ಅಥವಾ ಮಾಲಿನ್ಯದ ನಿರ್ದಿಷ್ಟ ಮೂಲಗಳನ್ನು ಸಹ ಇದರಲ್ಲಿ ಸೇರಿಸಲಾಗಿದೆ. 2010 ರ ಅಧಿನಿಯಮದ 2 ನೇ ಪ್ರಕರಣದ ಸದರಿ (ಎಮ್) ಖಂಡವನ್ನು ಈ ಕೆಳಗಿನಂತೆ ಓದಲಾಗಿದೆ:

" (ಎಮ್) " ಪರಿಸರಕ್ಕೆ ಸಂಬಂಧಿಸಿದ ಮಹತ್ವದ ಪ್ರಶ್ನೆ " ಎಂಬ ಪದಾವಳಿಯು,

(i) ಒಬ್ಬ ವ್ಯಕ್ತಿಯು,

(ಎ) ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪನ್ನು ಹೊರತುಪಡಿಸಿ, ಜನ ಸಮುದಾಯವು ಪರಿಸರ ಸಂಬಂಧಿ ಪರಿಣಾಮಗಳಿಂದ ಬಾಧಿತರಾಗುವ ಅಥವಾ ಬಾಧಿತರಾಗುವ ಸಂಭವವಿರುವ; ಅಥವಾ

(ಬಿ) ಪರಿಸರಕ್ಕೆ ಅಥವಾ ಸ್ವತ್ತಿಗೆ ಉಂಟಾದ ಹಾನಿಯ ತೀವ್ರತೆಯು ಗಣನೀಯವಾಗಿರುವ; ಅಥವಾ

(ಸಿ) ಸಾರ್ವಜನಿಕ ಆರೋಗ್ಯಕ್ಕೆ ಸಾಕಷ್ಟು ಸ್ಥೂಲ ಹಾನಿಯಾಗಿರುವ

-ನಿರ್ದಿಷ್ಟ ಶಾಸನಾತ್ಮಕ ಪರಿಸರ ಸಂಬಂಧಿ ಬಾಧ್ಯತೆಯನ್ನು ನೇರವಾಗಿ ಉಲ್ಲಂಘಿಸಿರುವ; ಅಥವಾ

(ii) ನಿರ್ದಿಷ್ಟ ಕಾರಚಟುವಟಿಕೆಗೆ ಅಥವಾ ಮಾಲಿನ್ಯದ ನಿರ್ದಿಷ್ಟ ಮೂಲಕ್ಕೆ ಸಂಬಂಧಿಸಿದ ಪರಿಸರ ಸಂಬಂಧಿ ಪರಿಣಾಮಗಳನ್ನು ಉಂಟುಮಾಡಿದ

ನಿದರ್ಶನವನ್ನು ಒಳಗೊಳ್ಳತಕ್ಕದ್ದು.

ಆದ್ದರಿಂದ, ಈ ಅರ್ಜಿಯಲ್ಲಿ ಎತ್ತಬೇಕೆಂದು ಕೋರಿದ ವಿವಾದಗಳನ್ನು ನ್ಯಾಯಾಧಿಕರಣದ ಮುಂದೆ ಎತ್ತಬೇಕೆಂಬುದು ಸುಸ್ಪಷ್ಟ.ಸಂದರ್ಭವು ಹೀಗಿರುವಾಗ, ಪ್ರತ್ಯರ್ಜಿದಾರ ಸಂಖ್ಯೆ -2 ಇವರ ಪರ ಎತ್ತಿದ ಆಕ್ಷೇಪಣೆಯನ್ನು ಸಮರ್ಥಿಸಲಾಗಿದೆ ಮತ್ತು ಈ ವಿಷಯದಲ್ಲಿ ರಿಟ್ ಅಧಿಕಾರ ವ್ಯಾಪ್ತಿಯ ಚಲಾವಣೆಯನ್ನು ಅ ನಿರಾಕರಿಸಲಾಗಿದೆ.

ಆದಾಗ್ಯೂ, ಕಾನೂನಿಗೆ ಅನುಸಾರವಾಗಿ, ಇತರ ಸೂಕ್ತ ಪರಿಹಾರಗಳಿಗಾಗಿ ಪರಿಹಾರೋಪಾಯ ಕೈಗೊಳ್ಳುವ ವಿಷಯವನ್ನು ನಾವು ಅರ್ಜಿದಾರನಿಗೆ ಬಿಟ್ಟುಬಿಡುತ್ತೇವೆ.

ಈ ಅರ್ಜಿಯಲ್ಲಿ ಎತ್ತಬೇಕೆಂದು ಕೋರಿದ ವಿವಾದಗಳ ಗುಣಾರ್ಹತೆಗಳನ್ನು ಕುರಿತು, ಈ ನ್ಯಾಯಾಲಯವು ತೀರ್ಪು ನೀಡಿರುವುದಿಲ್ಲ ಎಂಬುದನ್ನು ಸಹ ಸ್ಪಷ್ಟಪಡಿಸಲಾಗಿದೆ.

ಮೇಲೆ ಹೇಳಿದ ಅಭಿಪ್ರಾಯಗಳಿಗೆ ಒಳಪಟ್ಟು ಅರ್ಜಿಯನ್ನು ವಿಲೆ ಮಾಡಲಾಗಿದೆ.